# ಉಪತಹಶೀಲ್ದಾರವರ ನ್ಯಾಯಾಲಯ, ಕೋಗಳಿ, ಹ.ಬೊ.ಹಳ್ಳಿ ತಾಲೂಕು.

ಸಂ/ಕಂ/ಪಹಣಿ/ವಿವಾದ/65/2015–16

ದಿನಾಂಕ:13.07.2016

ಉಪಸ್ಥಿತರು:–ವಿ.ಹೆಚ್.ಮಲ್ಲಿಕಾರ್ಜುನ,
ಉಪ ತಹಶೀಲ್ದಾರರು,
ನಾಡ ಕಾರ್ಯಾಲಯ, ಕೋಗಳಿ

| *ಅರ್ಜಿದಾರರು* | *ತಕರಾರುದಾರರು* |
|---|---|
| ತಳಕಲ್ಲು ಹನುಮಕ್ಕ ಗಂಡ ಕೊಟ್ರಪ್ಪ<br>ಗ್ರಾಮ:–ಅಲಬೂರು ತಾ:–ಹೆಚ್.ಬಿ.ಹಳ್ಳಿ | ಕಂದಾಯ ನಿರೀಕ್ಷಕರು, ಕೋಗಳಿ |

**ವಿವಾದಿತ ಜಮೀನಿನ ವಿವರ:**

| *ಕ್ರ.ಸಂ.* | *ತಾಲೂಕು* | *ಗ್ರಾಮದ ಹೆಸರು* | *ಸ.ನಂ.* | *ವಿಸ್ತೀರ್ಣ(ಎಕರೆಗಳಲ್ಲಿ)* | *ತರಹೆ* |
|---|---|---|---|---|---|
| 1. | ಹಗರಿಬೊಮ್ಮನಹಳ್ಳಿ | ಅಲಬೂರು | 421/ಎ/2 | 12–40 | ಖುಷ್ಕಿ |
| 2. | ” | ” | 421/ಬಿ | 2–85 | ” |
| 3. | ” | ” | 423/ಎ | 11–88 | ” |

**ಪೀಠಿಕೆ:–**

ಬಳ್ಳಾರಿ ಜಿಲ್ಲೆ ಹಗರಿಬೊಮ್ಮನಹಳ್ಳಿ ತಾಲೂಕಿನ ಅಲಬೂರು ಗ್ರಾಮದ ವಿವಾದಿತ ಜಮೀನಿಗೆ ಸಂಬಂಧಿಸಿದಂತೆ, ಬಳ್ಳಾರಿ ಜಿಲ್ಲೆ ಹಗರಿಬೊಮ್ಮನಹಳ್ಳಿ ತಾಲೂಕಿನ ಅಲಬೂರು ಗ್ರಾಮದ ನಿವಾಸಿಯಾದ ತಳಕಲ್ಲು ಹನುಮಕ್ಕ ಗಂಡ ಕೊಟ್ರಪ್ಪ ಇವರು ಪೌತಿ ವಾರಸು ಪ್ರಕಾರ ಹಕ್ಕುಬದಲಾವಣೆಯನ್ನು ಮಾಡಲು ದಿನಾಂಕ:11.08.2015 ರಂದು ಅರ್ಜಿಯನ್ನು ಸಲ್ಲಿಸಿರುತ್ತಾರೆ. ಗ್ರಾಮದಲ್ಲಿ ನಮೂನೆ–21 ರ ನೋಟೀಸನ್ನು ದಿನಾಂಕ:14.08.2015 ರಂದು ಜಾರಿಮಾಡಲಾಗಿ, ನಿಗದಿತ ಅವಧಿಯೊಳಗೆ ಲಿಖಿತವಾಗಿ ಆಕ್ಷೇಪಣೆ ಸಲ್ಲಿಸಿರುವುದಿಲ್ಲ. ಪೌತಿ ವಾರಸು ಪ್ರಕಾರ 4 ಜನರ ಹೆಸರು ಚೆಕ್‌ಲೀಸ್ಟ್‌ನಲ್ಲಿ ಇಲ್ಲದ ಕಾರಣ, ಎಂ.ಆರ್.ನಂ.26/15–16 ರ ಕಡತವು ವಿವಾದಾಸ್ಪದ ಪ್ರಕರಣವೆಂದು ಪರಿಗಣಿಸಿ ಕಂದಾಯ ನಿರೀಕ್ಷಕರು, ಕೋಗಳಿ ಇವರು ಈ ಕಾರ್ಯಾಲಯಕ್ಕೆ ವರದಿ ಸಲ್ಲಿಸಿರುತ್ತಾರೆ. ಅರ್ಜಿದಾರರಿಗೆ ದಿನಾಂಕ:29.10.2015 ಕ್ಕೆ ವಿಚಾರಣೆಗೆ ಹಾಜರಾಗಲು ನೋಟೀಸನ್ನು ಜಾರಿ ಮಾಡಲಾಯಿತು.

ಪ್ರಕರಣವನ್ನು ದಿನಾಂಕ:29.10.2015 ರಿಂದ 13.07.2016 ರವರೆಗೆ ವಿಚಾರಣೆಯನ್ನು ಮಾಡಲಾಯಿತು. ಅರ್ಜಿದಾರರು ಹಾಜರಾಗಿ ಹೇಳುವಂತೆ; ತನ್ನ ಹೆಸರಿಗೆ ಪೌತಿವಾರಸು ಪ್ರಕಾರ ಹಕ್ಕುಬದಲಾವಣೆ ಮಾಡಲು ಮೌಖಿಕವಾಗಿ ಹೇಳಿಕೆಯನ್ನು ನೀಡಿರುತ್ತಾರೆ.

ಪ್ರಕರಣದಲ್ಲಿ ಅರ್ಜಿದಾರರು ನೀಡಿದ ಹೇಳಿಕೆ ಮತ್ತು ದಾಖಲೆಗಳನ್ನು ಪರಿಶೀಲನೆಮಾಡಲಾಗಿ, ಸದರಿ ಜಮೀನುಗಳು ಪೌತಿ ಪಟ್ಟಾದಾರರಾದ ತಳಕಲ್ಲು ನೀಲವ್ವ/ಅಗ್ರಹಾರದ ನೀಲಮ್ಮ ಗಂಡ ಲೇಟ್ ಪತ್ರಿಬಸಪ್ಪ ಇವರ ಹೆಸರಿಗೆ ಪಟ್ಟಾ ಇದ್ದು, ಇವರು ಪೌತಿಯಾಗಿರುವ

ಕಾರಣ, ಇವರ ವಾರಸುದಾರರಾದ 1.ತಳಕಲ್ಲು ಹನುಮಕ್ಕ[ಅರ್ಜಿದಾರರು] 2.ಶಿವಪುತ್ರಮ್ಮ, 3.ಸೌಭಾಗ್ಯಮ್ಮ, 4.ಅನ್ನಪೂರ್ಣಮ್ಮ ಇವರ ಹೆಸರುಗಳನ್ನು ಜಂಟಿಯಾಗಿ ನಮೂದಿಸಿ ಪೌತಿ ವಾರಸು ಪ್ರಕಾರ ಹಕ್ಕುಬದಲಾವಣೆ ಮಾಡಲು ಈ ಕೆಳಕಂಡಂತೆ ಆದೇಶ;

## -:ಆದೇಶ:-

ಪೀಠಿಕೆಯಲ್ಲಿ ವಿವರಿಸಿದ ಸಂದರ್ಭ, ವಾಸ್ತವಾಂಶ, ಹಿನ್ನಲೆ ಮತ್ತು ಕಾರಣಗಳ ಆಧಾರದ ಮೇಲೆ ಎಂ.ಆರ್.ನಂ.26/2015-16 ರ ಪ್ರಕಾರ, ಪ್ರಕರಣದಲ್ಲಿ ಅರ್ಜಿದಾರರ ಜೊತೆಗೆ ವಂಶವೃಕ್ಷದಂತೆ ವಾರಸುದಾರರ ಹೆಸರಿಗೆ ಈ ಕೆಳಗಿನಂತೆ ಜಂಟಿಯಾಗಿ ಪೌತಿ ವಾರಸು ಪ್ರಕಾರ ಹಕ್ಕುಬದಲಾವಣೆ ಮಾಡಲು ಆದೇಶಿಸಿದೆ.

| *ಕ್ರಮ ಸಂಖ್ಯೆ* | *ತಾಲೂಕು* | *ಗ್ರಾಮ* | *ಸರ್ವೆ ನಂಬರ್* | *ವಿಸ್ತೀರ್ಣ* | *ಹಕ್ಕು ಬದಲಾವಣೆ ಪಡೆದವರು* |
|---|---|---|---|---|---|
| 01. | ಹಗರಿಬೊಮ್ಮನಹಳ್ಳಿ | ಅಲಬೂರು | 421/ಎ/2 | 12-40 | 1.ತಳಕಲ್ಲು ಹನುಮಕ್ಕ ಗಂಡ ಕೊಟ್ರಪ್ಪ<br>2.ಶಿವಪುತ್ರಮ್ಮ<br>3.ಸೌಭಾಗ್ಯಮ್ಮ<br>4.ಅನ್ನಪೂರ್ಣಮ್ಮ |
| 02. | " | " | 421/ಬಿ | 2-85 | |
| 03. | " | " | 423/ಎ | 11-88 | |

ಈ ಆದೇಶವನ್ನು ಹೇಳಿ ಬರೆಯಿಸಿ, ಗಣಕೀಕರಣ ಮಾಡಿಸಿ, ತಪ್ಪುಗಳನ್ನು ಸರಿಪಡಿಸಿ, ಈ ದಿನ ದಿನಾಂಕ:13.07.2016 ರಂದು ತೆರದ ನ್ಯಾಯಾಲಯದಲ್ಲಿ ಘೋಷಿಸಿದೆ.

13/7/16

[ವಿ.ಹೆಚ್.ಮಲ್ಲಿಕಾರ್ಜುನ]
**ಉಪ ತಹಶೀಲ್ದಾರರು,**
**ನಾಡ ಕಾರ್ಯಾಲಯ,ಕೋಗಳಿ**

ಪ್ರತಿಯನ್ನು:-

1. ಅರ್ಜಿದಾರರು ಮತ್ತು ತಕರಾರುದಾರರಿಗೆ.
2. ಭೂಮಿ ಕೇಂದ್ರ, ತಾಲೂಕು ಕಛೇರಿ, ಹಗರಿಬೊಮ್ಮನಹಳ್ಳಿ ಇವರಿಗೆ ಮುಂದಿನ ಸೂಕ್ತ ಕ್ರಮಕ್ಕಾಗಿ.
3. ಶುದ್ಧಪ್ರತಿ ಕಡತಕ್ಕೆ.